**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

**ಃ ಸಿ.ಸಿ.ಸಂ. 667/2022 ಃ**

**ಫಿರ್ಯಾದುದಾರರುಃ** ಸರ್ಕಾರದ ಪರ ಆರಕ್ಷಕರು, ಪುತ್ತೂರು ಗ್ರಾಮಾಂತರ ಠಾಣೆ, ಪುತ್ತೂರು

- ವಿರುದ್ಧ -

**ಆರೋಪಿತರುಃ** ಮಹಮ್ಮದ್ ಅಪ್ಘಾಕೀ ತಂದೆ ಟಿ ಎಸ್ ಅಬ್ದುಲ್ ರಹಿಮಾನ್
ವಯಸ್ಸು 22 ವರ್ಷ, ಟಿ ಎಸ್ ಮಂಜಿಲ್
ಸೂರಲ್ಪಾಡಿ ಕಿನ್ನಿಕಂಬಳ ಅಂಚೆ
ಬಡಗ ಉಳಿಪ್ಪಾಡಿ ಗ್ರಾಮ ಮಂಗಳೂರು ತಾಲೂಕು

**ಃ ಆಪಾದನೆ ಃ**

ಶ್ರೀ ಮತಿ ಪ್ರಿಯಾ ರವಿ ಜೋಗ್ಲೇಕರ್, ಬಿ.ಕಾಂ., ಎಲ್.ಎಲ್.ಎಂ., ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ನಾನು ಮೇಲ್ಕಂಡ ಆಪಾದಿತರಾದ ನಿಮ್ಮ ಮೇಲೆ ಕೆಳಕಂಡಂತೆ ಆರೋಪವನ್ನು ಹೊರಿಸುತ್ತಿದ್ದೇನೆ.

ಆರೋಪಿತರಾದ ನೀವು ದಿನಾಂಕ 20.02.2022 ರಂದು ಸಂಜೆ ಸುಮಾರು 04.00 ಗಂಟೆಗೆ ಮೈಸೂರು ಮಾಣಿ ಹೆದ್ದಾರಿಯಲ್ಲಿ ಪುತ್ತೂರು ತಾಲೂಕು ಅರಿಯಡ್ಕ ಗ್ರಾಮದ ಮಡ್ಯಂಗಳ ಎಂಬಲ್ಲಿ ಮೈಸೂರು ಕಡೆಯಿಂದ ಮಾಣಿ ಕಡೆಗೆ ರಾಜೀವ್ ಎಂಬುವವರು ಚಲಾಯಿಸುತ್ತಿದ್ದ ಕೆಎ 02-ಎಂಇ-3774 ನೇ ಕಾರಿನಲ್ಲಿ ಚಾಸಾ-1 ನೇಯವರು ಪ್ರಯಾಣಿಸುತ್ತಿದ್ದ ಮಾಣಿ ಕಡೆಯಿಂದ ಮೈಸೂರು ಕಡೆಗೆ ಕೆಎ 19 ಎಂಕೆ 0196 ನೇ ಕಾರನ್ನು ಆರೋಪಿಯು ಅಜಾಗರೂಕತೆ ಮತ್ತು ನಿರ್ಲಕ್ಷತನದಿಂದ ರಸ್ತೆಯ ಬಲಬದಿಗೆ ಚಲಾಯಿಸಿ ಚಾಸಾ-1 ನೇಯವರು ಪ್ರಯಾಣಿಸುತ್ತಿದ್ದ ಕಾರಿನ ಮುಂಭಾಗಕ್ಕೆ ಡಿಕ್ಕಿಯನ್ನುಂಟು ಮಾಡಿ ಆ ಮೂಲಕ ನೀವು **ಭಾ.ದಂ.ಸಂ.ಕಲಂ** 279 ರಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಎರಡೂ ವಾಹನಗಳು ಜಖಂಗೊಂಡಿದ್ದಲ್ಲದೇ ಕೆಎ 02 ಎಂಇ 3774 ನೇ ಕಾರಿನಲ್ಲಿದ್ದ ಚಾಸಾ-1 ನೇಯವರಿಗೆ ಗಲ್ಲ ಮುತ್ತ ಬಲ ಕಾಲಿನ ಮಂಡಿಗೆ ರಕ್ತಗಾಯ ಮತ್ತು ಗುದ್ದಿದ ರೀತಿಯ ಸಾಮಾನ್ಯ ಗಾಯವಾಗಿದ್ದು, ಹಾಗೂ ಚಾಸಾ-4 ನೇಯವರಿಗೆ ಮುಖದಲ್ಲಿ ಅಲ್ಲಲ್ಲಿ ಸಾಮಾನ್ಯ ಗಾಯವಾಗಿದ್ದು, ಹಾಗೂ ಅಪಘಾತಪಡಿಸಿದ ಕೆಎ 19 ಎಂಕೆ 0196 ನೇ ಕಾರಿನಲ್ಲಿದ್ದ ಪ್ರಯಾಣಿಕ ಚಾಸಾ-5 ನೇಯವರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿದ್ದು ಆ ಮೂಲಕ ಭಾ.ದಂ.ಸಂ. ಕಲಂ 337 ರಡಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಮಾಡಿರುವಿರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಚಾಸಾ-2 ನೇಯವರ ಬಲ ಕೈ ಮತುತ ಬಲ ಕಾಲಿಗೆ ಗುದ್ದಿದ ರೀತಿಯ ಗಂಭೀರ ಗಾಯ ಚಾಸಾ-3 ನೇಯವರ ಗಂಭೀರ ಗಾಯವಾಗಿದ್ದು ಆ ಮೂಲಕ ಭಾ.ದಂ.ಸಂ. ಕಲಂ 338 ರಡಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಮ್ಹಾಡಿರುವಿರಿ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಡಿಕ್ಕಿಪಡಿಸಿದ ಪರಿಣಾಮ ಕೆಎ 02 ಎಂಇ 3774 ನೇ ಕಾರಿನ ಚಾಲಕ ರಾಜೀವ್ ಪಿ ಜೆ ಪ್ರಾಯ 30 ವರ್ಷ ತಂದೆ ಜಯಕಮಾರ್ ಪಿ ಬಿ, ಪುನ್ನಟ್ಟೆ ಮನೆ, ಕುಂದಚೇರಿ ಗ್ರಾಮ, ಮಡಿಕೇರಿ ತಾಲೂಕು, ಕೊಡಗು ಜಿಲ್ಲೆ ಇವರು ಗಂಭೀರ ಗಾಯದಿಂದ ಪುತ್ತೂರು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮೃತಪಟ್ಟಿರುತ್ತಾರೆ. ಹಾಗೂ ಗಂಭೀರ ಗಾಯಗೊಂಡು ಮಂಗಳೂರಿನ ಇಂಡಿಯನ್ ಆಸ್ಪತ್ರೆಗೆ ದಾಖಲಾಗಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಕೆಎಂಸಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆಯಲ್ಲಿದ್ದ ಕು. ಜ್ಯೋತಿ ಪ್ರಾಯ 24 ವರ್ಷ, ತಂದೆ ಬೇಬಿ ಸಾಲ್ಯಾನ್, ಕಳವಾರು ಆಶ್ರಯ ಕಾಲೋನಿ, ಕೂಳೂರು ಗ್ರಾಮ, ಮಂಗಳೂರು ತಾಲೂಕು ಇವರು ಚಿಕಿತ್ಸೆಯಲ್ಲಿರುವಾಗಲೇ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕ 02.06.2022 ರಂದು 01.03 ಗಂಟೆಗೆ ಮೃತಪಟ್ಟಿದ್ದು ಆ ಮೂಲಕ ಭಾ.ದಂ.ಸಂ. ಕಲಂ 304(ಎ) ರಡಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಮಾಡಿರುವಿರಿ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಕಾರನ್ನು ಅಜಾಗರೂಕತೆ ಮತ್ತು ನಿರ್ಲಕ್ಷತನದಿಂದ ರಸ್ತೆಯ ಬಲಬದಿಗೆ ಚಲಾಯಿಸಿ ಆ ಮೂಲಕ ಆರ್ ಆರ್ ರೂಲ್ 7 ಜೊತೆಗೆ 177 ಐ ಎಂ ವಿ ಆಕ್ಟ್ ನಂತೆ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯದೊಳಗೆ ಮಾಡಿರುವಿರಿ.

ಮೇಲಿನ ದೋಷಾರೋಪಣೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.

ದಿನಾಂಕಃ 14.12.2022
ಸ್ಥಳ ಃ ಪುತ್ತೂರು. ದ.ಕ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು, ದ.ಕ.

**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

**ಃ ಸಿ.ಸಿ.ಸಂ. 667/2022 ಃ**

**ಫಿರ್ಯಾದುದಾರರುಃ** ಸರ್ಕಾರದ ಪರ ಆರಕ್ಷಕರು, ಪುತ್ತೂರು ಗ್ರಾಮಾಂತರ ಠಾಣೆ, ಪುತ್ತೂರು

- ವಿರುದ್ಧ -

**ಆರೋಪಿತರುಃ** ಮಹಮ್ಮದ್ ಅಪ್ಪಾಕೀ ತಂದೆ ಟಿ ಎಸ್ ಅಬ್ದುಲ್ ರಹಿಮಾನ್
ವಯಸ್ಸು 22 ವರ್ಷ, ಟಿ ಎಸ್ ಮಂಜಿಲ್
ಸೂರಲ್ಪಾಡಿ ಕಿನ್ನಿಕಂಬಳ ಅಂಚೆ
ಬಡಗ ಉಳಿಪ್ಪಾಡಿ ಗ್ರಾಮ ಮಂಗಳೂರು ತಾಲೂಕು

**ಃ ಆರೋಪಿಯ ಸಮರ್ಥನೆ ಃ**

ಪ್ರ. 1 : ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ :

ಪ್ರ. 2 : ನೀವು ಸದರಿ ಆಪಾದನೆಯನ್ನು ಒಪ್ಪಿಕೊಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ?

ಉತ್ತರ :

ಮೇಲಿನ ದೋಷಾರೋಪಣೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಓದಿ ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.

ದಿನಾಂಕಃ 14.12.2022.
ಸ್ಥಳ ಃ ಪುತ್ತೂರು. ದ.ಕ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು, ದ.ಕ.